**ದಿನಾಂಕ : 24.09.2011ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿಗೆ ಭೇಟಿ ನೀಡಿ ವಿವಿಧ ಕಟ್ಟಡ ಕಾಮಗಾರಿಗಳನ್ನು ಮತ್ತು ಬೋಧಕ ಆಸ್ಪತ್ರೆಯನ್ನು ಪರಿಶೀಲಿಸಿದ ವಿವರಗಳು ಈ ಕೆಳಗಿನಂತಿವೆ.**

ಪರಿಶೀಲನಾ ಸಮಯದಲ್ಲಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಧಾನ, ಸೌಧ, ಬೆಂಗಳೂರು ಇವರ ಜೊತೆಯಲ್ಲಿ ಹಾಜರಿದ್ದ ಅಧಿಕಾರಿಗಳು

| ಕ್ರಮ ಸಂಖ್ಯೆ | ಹಾಜರಿದ್ದ ಅಧಿಕಾರಿಯ ಹೆಸರು | ಪದನಾಮ |
|---|---|---|
| 1 | ಡಾ. ರಾಮಯ್ಯ | ನಿರ್ದೇಶಕರು, ರಿಮ್ಸ್, ರಾಯಚೂರು |
| 2 | ಶ್ರೀ ಮಲ್ಲಿಕಾರ್ಜುನ ಮೇಟಿ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| ಹಾಗು ಎಲ್ಲಾ ಶಾಖಾಧಿಕಾರಿಗಳು, ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್, ವಿಶೇಷ ಉಪ ವಿಭಾಗ, ರಾಯಚೂರು | | |
| 3 | ಶ್ರೀ ಮುರಳಿ | ಹೆಚ್ಐಪಿಎಲ್ ಗುತ್ತಿಗೆದಾರರ ಪ್ರತಿನಿಧಿಗಳು |

ಮೊದಲಿಗೆ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾಲೇಜು ಕಟ್ಟಡದಲ್ಲಿರುವ ವಿವಿಧ ವಿಭಾಗಗಳನ್ನು ವೀಕ್ಷಿಸಿದರು ಮತ್ತು ಕಾಲೇಜು ಕಟ್ಟಡ ನಿರ್ಮಾಣದಲ್ಲಿ ಗುಣಮಟ್ಟವನ್ನು ಕಾಯ್ದಿರಿಸಿದ್ದು, ಅಂತಿಮ ರೂಪುರೇಷೆಗಳ ಬಗ್ಗೆ ಕ್ರಮ ಕೈಗೊಂಡು ಕಟ್ಟಡವು ಸುಂದರವಾಗಿರುವಂತೆ ಸೂಚಿಸಿದರು.

ಕಾಲೇಜು ಕಟ್ಟಡದಲ್ಲಿ ಒಟ್ಟು ನೆಲಮಹಡಿ + ಮೂರು ಮಹಡಿಗಳಿದ್ದು 7 ಲಿಫ್ಟ್‌ಗಳಿಗಾಗಿ ಸ್ಥಳಾವಕಾಶ ಮಾಡಿದ್ದು ಆದರೆ ಇದುವರೆಗೆ ಲಿಫ್ಟ್‌ಗಳನ್ನು ಅಳವಡಿಸದಿರುವ ಬಗ್ಗೆ ಅಸಮಧಾನ ವ್ಯಕ್ತ ಪಡಿಸಿದರು. ಈ ಕುರಿತು ನಿರ್ದೇಶಕರು ಲಿಫ್ಟ್‌ಗಳನ್ನು ಅಳವಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿ, ಸರ್ಕಾರದ ಅನುದಾನದ ನೀರೀಕ್ಷೆಯಲ್ಲಿರುತ್ತೇಯಂದು ಪ್ರಧಾನ ಕಾರ್ಯದರ್ಶಿಗಳಿಗೆ ಮನವರಿಕೆ ಮಾಡಿದರು. ಕಾಲೇಜಿನಲ್ಲಿ ನಿರ್ಮಿಸಲಾಗಿರುವ ಕಾಲೇಜು ಕಟ್ಟಡ, ಮ್ಯೂಜಿಯಮ್, ಕೇಂದ್ರ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ, ಸಭಾಂಗಣ, ಆಡಳಿತ ವಿಭಾಗ ಮತ್ತು ಬೋಧಾನ ಕೊಠಡಿಗಳನ್ನು ವೀಕ್ಷಿಸಲಾಯಿತು.

ರಿಮ್ಸ್ ಅವರಣದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ 500 ಹಾಸಿಗೆಗಳ ಆಸ್ಪತ್ರೆಯನ್ನು ವೀಕ್ಷಿಸಿ ಗುಣಮಟ್ಟ ಕಾಯ್ದು ಕೊಂಡ ಬಗ್ಗೆ ತೃಪ್ತಿಯನ್ನು ವ್ಯೆಕ್ತಪಡಿಸಿ, ಈ ಕಟ್ಟಡಕ್ಕೆ ಅತಿ ಅವಶ್ಯವಾದ ಲಿಫ್ಟ್‌ಗಳು, ಜನರೇಟರ್ ಹಾಗು ವಿದ್ಯುತ್ ಪೂರೈಕೆ ಆಗದೇ ಇರುವುದು ಕಂಡು ಬಂದಿದ್ದು, ಮುಂಬರುವ 2011-12ನೇ ಸಾಲಿನ ಭಾರತೀಯ ವೈದ್ಯಕೀಯ ಮಂಡಳಿಯ ತಪಾಸಣೆಯು ಅತಿ ಮುಖ್ಯವಾಗಿರುವುದರಿಂದ ಮೇಲಿನ ಕಾಮಗಾರಿಗಳನ್ನು ಪೂರ್ಣಗೊಳಿಸಿಕೊಡಬೇಕೆಂದು ನಿರ್ದೇಶಕರು, ರಿಮ್ಸ್, ರಾಯಚೂರು ಇವರು ತಿಳಿಸಿರುವುದರಿಂದ ಲೋಕೋಪಯೋಗಿ ಇಲಾಖೆಯು ಇದನ್ನು ಗಮನದಲ್ಲಿಟ್ಟುಕೊಂಡು ಅತಿ ಅವಶ್ಯ ಕೆಲಸಗಳಾದ ಲಿಫ್ಟ್‌ಗಳು, ಜನರೇಟರ್ ಹಾಗು ವಿದ್ಯುತ್ ಪೂರೈಕೆಗಳನ್ನು ಜರೂರಾಗಿ ಅಳವಡಿಸಲು ಸ್ಥಳದಲ್ಲಿ ಹಾಜರಿದ್ದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು / ಸಿಬ್ಬಂದಿಗಳಿಗೆ ಸೂಚಿಸಲಾಯಿತು.

ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಬೋಧಕ ಆಸ್ಪತ್ರೆಯ ಕಟ್ಟಡದ ನೆಲಮಹಡಿಯಿಂದ ನಾಲ್ಕನೇ ಮಹಡಿಯವರೆಗೆ ಕಟ್ಟಡ ಕಾಮಗಾರಿ ಸಂಪೂರ್ಣಗೊಂಡಿದ್ದು, ಸಾಧ್ಯವಾದದ್ದನ್ನು ಉಪಯೋಗಿಸಿಕೊಳ್ಳಲು ಹಾಗು ಐದು ಮತ್ತು ಆರನೇ ಮಹಡಿಯು ಪ್ರಗತಿಯಲ್ಲಿರುವ ಕಾಮಗಾರಿಯನ್ನು ಗಮನದಲ್ಲಿಟ್ಟು ಕೊಂಡು ಕಾಲಕಾಲಕ್ಕೆ ಪರಿವೀಕ್ಷಿಸಿ ಭಾರತೀಯ ವೈದ್ಯಕೀಯ ಮಂಡಳಿಗೆ ನಿಯಮಾವಳಿಯಂತೆ ಬೇಕಾಗುವ ಎಲ್ಲಾ ಸೌಲಭ್ಯಗಳನ್ನು ಪೂರೈಸಿಕೊಳ್ಳಲು ಲೋಕೋಪಯೋಗಿ ಇಲಾಖೆಯೊಂದಿಗೆ ಸಂಪರ್ಕಿಸಿ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಹಾಗು ಬೋಧಕ ಆಸ್ಪತ್ರೆಯ ಪೂರ್ಣ ಪ್ರಮಾಣದ ಕಾಮಾಗಾರಿಯನ್ನು ಜೂನ್ 2012ರೊಳಗಾಗಿ ಪೂರ್ಣಗೊಳಿಸಲು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು / ಸಿಬ್ಬಂದಿಗಳಿಗೆ ಹಾಗು ಗುತ್ತಿಗೆದಾರರಿಗೆ ಸೂಚಿಸಲಾಯಿತು.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/-
(ಕೆ.ಹೆಚ್ ಗೋಪಾಲಕೃಷ್ಣಗೌಡ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

**ಪ್ರತಿಯನ್ನು,**

1. ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಕ್ತ ಪಾಲನೆಗಾಗಿ ರವಾನಿಸಲಾಗಿದೆ.
2. ಕಾರ್ಯಪಾಲಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ರಾಯಚೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
3. ಸಹಾಯಕ ಕಾರ್ಯಪಾಲಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಶೇಷ ಉಪವಿಭಾಗ, ರಿಮ್ಸ್, ರಾಯಚೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
4. ಮೆ॥ ಹೈಯಗ್ರೀವ ಇನ್‌ಫ್ರಾಟೆಕ್ ಪ್ರಜೆಕ್ಟ್ ಲಿಮಿಟೆಡ್ ಇವರಿಗೆ ಮಾಹಿತಿಗಾಗಿ
5. ಕಛೇರಿ ಪ್ರತಿ

(ಕೆ.ಹೆಚ್ ಗೋಪಾಲಕೃಷ್ಣಗೌಡ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು